ಅನುಭವಗಳು, ಅನುಭವಿಸಿದವರಿಗೇ ಅರಿವಾಗುವಂತಹುದು. ಹಲವು ಬಾರಿ ಅವು ಬಹಳ ಸೂಕ್ಷ್ಮವಾಗಿ ಜರುಗುತ್ತವೆ, ಮತ್ತೆ ಕೆಲವೊಮ್ಮೆ ಹೀಗೆ ರಾಜಾರೋಷವಾಗಿ ಎಗ್ಗಿಲ್ಲದೆ ನಡೆಯುತ್ತವೆ.

ಒಂದು ಕಂಪನಿ ಲಿಂಗ ಸಮಾನತೆಯನ್ನು ತನ್ನ ‘ಪಾಲಿಸಿ’ಯಾಗಿ ಮಾಡಿದ್ದರೂ, ಲಿಂಗ ತಾರತಮ್ಯದ ಪ್ರಕರಣಗಳು ಬಹಳಷ್ಟು ಬಾರಿ ಮೇಲಿನ ಹಂತದ ಮ್ಯಾನೇಜ್‌ಮೆಂಟ್ ಗಮನಕ್ಕೆ ಬಾರದೆಯೇ ಹೋಗಬಲ್ಲವು. ತಾರತಮ್ಯಕ್ಕೆ ಗುರಿಯಾದ ಹೆಣ್ಣುಮಕ್ಕಳು ಜೂನಿಯರ್ ಹಂತದಲ್ಲಿ ಇರುವಾಗ ಅವರಿಗೆ ಧ್ವನಿ ಇರುವುದಿಲ್ಲ. ಹೆಣ್ಣು ಮಕ್ಕಳು ಒಬ್ಬರೋ, ಇಬ್ಬರೋ ಇದ್ದ ಆ ಕಾಲದಲ್ಲಿ ಹೋರಾಡುವುದು ಸುಲಭವಾಗಿರಲಿಲ್ಲ. ಬಿ.ಇ.ಎಲ್. ಕಂಪನಿಯ ಪ್ರಥಮ ಮಹಿಳಾ ಎಂಜಿನಿಯರ್ ಡಿ. ಲಕ್ಷ್ಮಿ ಅವರಿಗೆ ಅತ್ಯಂತ ಸವಾಲಿನಂತಹ ಮಿಲಿಟರಿ ಪ್ರಾಜೆಕ್ಟ್‌ಗಳಲ್ಲಿ ದುಡಿಯುವ ಅವಕಾಶ ನೀಡಿ, ಆಕೆಯ ಬೆನ್ನಿಗೆ ಬೆಂಬಲವಾಗಿ ನಿಂತ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಕಂಪನಿಯಲ್ಲಿಯೇ, ಶಾಂತಾ ಅವರ ಅನುಭವ ಭಿನ್ನವಿತ್ತು.

ತೀರಾ ಬೇಸರಪಟ್ಟ ಶಾಂತಾ ಅವರನ್ನು ‘ಟೆಕ್ನಿಕಲ್ ಟ್ರೈನಿಂಗ್ ಸೆಂಟರ್’ಗೆ (ಟಿ.ಟಿ.ಸಿ.) ವರ್ಗ ಮಾಡಲಾಯಿತು. ಆಗ ಟಿ.ಟಿ.ಸಿ.ಗೆ ಮುತ್ತೂ ರಾಮನ್ ಮುಖ್ಯಸ್ಥರಾಗಿದ್ದರು. ಅಲ್ಲಿ ಶಾಂತಾಗೆ ಅವರ ಕನಸಿನ ಸಂಶೋಧನೆ ಮತ್ತು ವಿಕಾಸದ ಪ್ರಾಜೆಕ್ಟ್ ದೊರೆಯಿತು. ಅದು ದೂರದರ್ಶನದ ರಿಸೀವರ್ ಅನ್ನು ಆರಂಭದಿಂದ ವಿಕಾಸಗೊಳಿಸಿ ತಯಾರಿಸುವ ಯೋಜನೆಯಾಗಿತ್ತು. ಮುತ್ತೂ ರಾಮನ್ ಶಾಂತಾ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಯೋಜನೆಯ ಉಸ್ತುವಾರಿ ಶಾಂತಾ ಅವರದಾಗಿತ್ತು. ಶಾಂತಾ ಅವರ ಈ ಕೆಲಸಕ್ಕೆ ರಾಣಿ ಎಂಬುವವರು ಸಹಾಯಕರಾದರು. ಜಪಾನಿನಿಂದ ಬಂದ ತಜ್ಞರೊಡನೆ ಸಮಾಲೋಚಿಸುವ ಅವಕಾಶ ಶಾಂತಾ ಅವರಿಗೆ ದೊರೆಯಿತು. ಹಂತ ಹಂತವಾಗಿ ದೂರದರ್ಶನದ ವಿನ್ಯಾಸ ವಿಕಾಸಗೊಂಡಂತೆ ಅವರಿಗೆ ಎಲ್ಲಿಲ್ಲದ ಖುಷಿ. ಆಗ ಸಾಮಾನ್ಯವಾಗಿ ಇದ್ದದ್ದು ನಿರ್ವಾತ ಕೊಳವೆಗಳ (ವ್ಯಾಕ್ಯೂಮ್ ಟ್ಯೂಬ್) ತಂತ್ರಜ್ಞಾನ. ಶಾಂತಾ ಸಂಪೂರ್ಣವಾಗಿ ಸೆಮಿಕಂಡಕ್ಟರ್ ತಂತ್ರಜ್ಞಾನದ ‘ಟ್ರಾನ್‌ಸಿಸ್ಟರ್’ಗಳನ್ನು ಬಳಸಿ ದೂರದರ್ಶನದ ರಿಸೀವರ್ ಅನ್ನು ವಿನ್ಯಾಸಗೊಳಿಸಿದರು. ಈ ಯೋಜನೆ ಅವರಿಗೆ ಆತ್ಮವಿಶ್ವಾಸವನ್ನು, ಹಿರಿಯ ಅಧಿಕಾರಿಗಳ ಗಮನವನ್ನೂ ತಂದುಕೊಟ್ಟಿತ್ತು.


SHANTA VIJAYARAGHAVAN

Shanta Vijayaraghavan is a Deputy Engineer in the Development Section of Bharat Electronics (BEL) Bangalore. Intensely interested in her job, Shanta, who is a research engineer, is always full of new ideas for designs and projects. "Right now, I am working on a fully transistorized television receiver. The design is entirely my own, and I am working on it. I will be very happy if I succeed in this project on my own; it would be some achievement," said Shanta.

Shanta has a brilliant academic record. She had her schooling and college education in Mysore. She got distinction marks in physics and mathematics in the B.Sc. examination, which enabled her to get admission into the Electrical Communication Engineering course of the Tata Indian Institute of Science in Bangalore. At the end of three years Shanta got her B.E. degree. "The emphasis in this course was on communications, which has gained so much importance in the present day," explained Shanta, when asked for more details of the specialised course, she studied. Shanta worked in the same Institute as a Technical Assistant for a short while, before joining the BEL as an Assistant Engineer in the Research Section.

"Though engineering is slowly attracting women these days, there are not many in Mysore State", observed Shanta. "Probably, there are about half-a-dozen lady engineers, working in Bangalore," she added.

"Hamming" was one of Shanta's hobbies before her marriage. She was an active "ham", and edited the special YL issues brought out by the Bangalore Radio Amateur Club. She is also a Member of the BEL Amateur Club. She tinkers a lot with transistors and sets. "But now I do not get much time for it, though I have my own receiver set at home," she said. Shanta reads lots of technical books, connected with the TV project she is working on. Very fond of Carnatic music, Shanta is a good singer. She loves attending music concerts and conferences. Shanta is happily married to an engineer and has a little son named Bharat.

ಶಾಂತಾ ವಿಜಯರಾಘವನ್ ಅವರ ಬಗ್ಗೆ ಶಕುಂತಲಾ ಬಾಲು ಅವರು ‘ಈವ್ಸ್ ವೀಕ್ಲಿ’ಗೆ ಬರೆದ ಲೇಖನ

ಆ ಸಮಯದಲ್ಲಿ ಅಂದಿನ ಜನಪ್ರಿಯ ಮಹಿಳಾ ಪತ್ರಿಕೆ ಎನಿಸಿಕೊಂಡಿದ್ದ ‘ಈವ್ಸ್ ವೀಕ್ಲಿ’ಗೆ ಶಕುಂತಳಾ ಬಾಲು, ಶಾಂತಾ ಅವರ ಸಂದರ್ಶನ ಮಾಡಿ ಲೇಖನ ಬರೆದಿದ್ದರು. ಈ ಸಂದರ್ಶನದಲ್ಲಿ ಶಾಂತಾ, ‘ನಿಧಾನವಾಗಿ ಎಂಜಿನಿಯರಿಂಗ್ ರಂಗ ಮಹಿಳೆಯರನ್ನು ಆಕರ್ಷಿಸುತ್ತಿದೆ. ಆದರೂ ಸದ್ಯಕ್ಕೆ ಬೆಂಗಳೂರಿನಲ್ಲಿ, ಕೇವಲ ಅರ್ಧ ಡಜನ್ ಮಹಿಳಾ ಎಂಜಿನಿಯರುಗಳು ಮಾತ್ರ ಕೆಲಸ ಮಾಡುತ್ತಿದ್ದಾರೆ’ ಎಂದಿದ್ದರು. ಇಂದು, ಅರ್ಧ ಶತಮಾನದಾಚೆಗೆ ಈ ಸಂಖ್ಯೆ ಲಕ್ಷವನ್ನಂತೂ ಮೀರಿದೆ.

1970ರಲ್ಲಿ ಪತಿ ವಿಜಯರಾಘವನ್ ಐ.ಟಿ.ಐ. ಕಂಪನಿಗೆ ರಾಜೀನಾಮೆ ಕೊಟ್ಟು, ಬಾಂಬೆಯ ‘ಬ್ಲೂ ಸ್ಟಾರ್’ ಕಂಪನಿಗೆ ಸೇರಿದರು. ಅಲ್ಲಿಂದ ಅವರನ್ನು ಜುಲೈ ತಿಂಗಳಿನಲ್ಲಿ ಅಮೆರಿಕಗೆ ಮೂರು ತಿಂಗಳ ಕಾಲಕ್ಕೆ ಕಳುಹಿಸಿದರು. ಎಲೆಕ್ಟ್ರಾನಿಕ್ ರಂಗ ವಿಕಾಸಗೊಂಡು, ವಿಸ್ತರಿಸುತ್ತಿದ್ದ ಸಮಯವದು. ವಿಜಯರಾಘವನ್ ‘ಬ್ಲೂ ಸ್ಟಾರ್’ನಲ್ಲಿ ಆಗಷ್ಟೇ ಆರಂಭವಾದ ‘ಕಂಪ್ಯೂಟರ್’ ವಿಭಾಗಕ್ಕೆ ಮುಖ್ಯಸ್ಥರಾದರು. 1970ರಲ್ಲಿಯೇ ಶಾಂತಾ ಬಿ.ಇ.ಎಲ್.ನ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಪುಟ್ಟ ಮಗುವಿನೊಡನೆ ಬಾಂಬೆಗೆ ಬಂದರು. ಬದುಕು ಈ ದೊಡ್ಡ ನಗರದಲ್ಲಿ, ಪುಟ್ಟದೊಂದು ಫ್ಲಾಟ್‌ನಲ್ಲಿ ಪುನರಾರಂಭವಾಗಿತ್ತು. ಮರು ವರ್ಷ, ಎರಡನೇ ಮಗ ಜಯಂತ್ ಹುಟ್ಟಿದ.


ಹೊಸಬಾಳಿನ ಹೊಸ್ತಿಲಲ್ಲಿ: ವಿವಾಹದ ದಿನ ಶಾಂತಾ ಮತ್ತು ವಿಜಯರಾಘವನ್

1972, ‘ಬ್ಲೂ ಸ್ಟಾರ್’ನೊಡನೆ ‘ಎಚ್.ಪಿ. ಕಂಪ್ಯೂಟರ್ಸ್’ನ ಏಜೆನ್ಸಿ ಇತ್ತು, ಕಂಪನಿ ಭಾರತದ ಮೊಟ್ಟ ಮೊದಲ ‘ಟೈಮ್ ಶೇರಿಂಗ್ ಕಂಪ್ಯೂಟರ್’ ಅನ್ನು ಐ.ಐ.ಎಮ್. ಅಹಮದಾಬಾದಿಗೆ ಮಾರಿತು. ವಿಜಯರಾಘವನ್ ಈ ಮಾರಾಟಕ್ಕೆ ಜವಾಬ್ದಾರರಾಗಿದ್ದರು. ‘ಟೈಮ್ ಶೇರಿಂಗ್ ಕಂಪ್ಯೂಟರ್’ನಲ್ಲಿ ಒಂದೇ ಕಂಪ್ಯೂಟರ್ ಅನ್ನು ಹಲವರು ಒಟ್ಟಿಗೇ ಬಳಸಬಹುದು. ಆ ಕಾಲಕ್ಕೆ,